ಕರ್ನಾಟಕ ಸರ್ಕಾರ
(ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ)
# ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಯಮಿತ
ಗ್ರಾಮೀಣಾಭಿವೃದ್ಧಿ ಭವನ, 4ನೇ ಮತ್ತು 5ನೇ ಮಹಡಿ, ಆನಂದರಾವ್ ವೃತ್ತ, ಬೆಂಗಳೂರು-560009.
ದೂರವಾಣಿ ಸಂ : ಆಡಳಿತ : 080-28015635/36/46 ಕಾಮಗಾರಿ : 080-28015640/41 ಲೆಕ್ಕಪತ್ರ : 080-28015634/37
ಫ್ಯಾಕ್ಸ್ : 080-22879901, 28015644/45/34 ಇ-ಮೇಲ್ : md@kridl.net ವೆಬ್ ಸೈಟ್ : www.kridl.org

**ಸಂ**: ಕೆಆರ್ಐಡಿಎಲ್/ಕಾಮಗಾರಿ/EGL/2023-24 **ದಿನಾಂಕ**: 10/04/2023

## ಸುತ್ತೋಲೆ

**ವಿಷಯ**: ಸಂಸ್ಥೆಗೆ ವಹಿಸಲಾದ ಕಾಮಗಾರಿಗಳನ್ನು ಸಂಸ್ಥೆಯ ಪರವಾಗಿ ನಿರ್ವಹಿಸಲು empanelment ಮಾಡಲಾದ ಗ್ರೂಪ್ ಲೀಡರ್‌ಗಳನ್ನು ಮರು ನೋಂದಣಿ ಮಾಡುವ ಕುರಿತು.

**ಉಲ್ಲೇಖ**: 1. 204ನೇ ಆಡಳಿತ ಮಂಡಳಿ ಸಭೆ ದಿನಾಂಕ :25/10/2021.
2. ಪತ್ರಿಕಾ ಪ್ರಕಟಣೆ ಸಂಖ್ಯೆ:ಕೆಆರ್ ಐಡಿಎಲ್/ಕಾಮಗಾರಿ/ಇಜಿಎಲ್/2021-22, ದಿ:17/02/2022.
3. ಈ ಕಛೇರಿ ಪತ್ರ ಸಂ: ಕೆಆರ್ಐಡಿಎಲ್/ಕಾಮಗಾರಿ/EGL/2021-22, ದಿ:22/02/2022.
4. ಈ ಕಛೇರಿ ಪತ್ರ ಸಂ: ಕೆಆರ್ಐಡಿಎಲ್/ಕಾಮಗಾರಿ/EGL/2021-22, ದಿ:23/03/2022.

****

ಮೇಲಿನ ವಿಷಯ ಮತ್ತು ಉಲ್ಲೇಖದನ್ವಯ, ಈಗಾಗಲೇ empanelment ಮಾಡಲಾದ ಗ್ರೂಪ್ ಲೀಡರ್‌ಗಳು ಒಂದು ವರ್ಷದ ಕಾಲಾವಧಿಯಲ್ಲಿ ಕಾಮಗಾರಿಗಳನ್ನು ತೃಪ್ತಿಕರವಾಗಿ ನಿರ್ವಹಿಸಿರುವುದನ್ನು ಕಾರ್ಯಪಾಲಕ ಅಭಿಯಂತರರು ಖಾತರಿಪಡಿಸಿಕೊಂಡು, ಯಾವುದೇ ಆಕ್ಷೇಪಣೆಗಳಿಲ್ಲದ ಗ್ರೂಪ್ ಲೀಡರ್‌ಗಳನ್ನು ಈಗಾಗಲೇ ಸೂಚಿಸಿರುವ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಟ್ಟು, ಈಗಾಗಲೇ ಕಾರ್ಯನಿರ್ವಹಿಸುತ್ತಿರುವ / ಅನುಮೋದಿಸಿರುವ ಗ್ರೂಪ್ ಲೀಡರ್‌ಗಳಿಗೆ ಮರು ನೋಂದಣಿ ಮಾಡಲು ಸೂಚಿಸಿದೆ.

1. ಮರು ನೋಂದಣಿ ಮಾಡಲು ಬಯಸುವ ಗ್ರೂಪ್ ಲೀಡರ್ ಗಳು ಶುಲ್ಕವನ್ನು ವ್ಯವಸ್ಥಾಪಕ ನಿರ್ದೇಶಕರು, ಕೆಆರ್ಐಡಿಎಲ್, ಬೆಂಗಳೂರು ರವರ ಹೆಸರಿನಲ್ಲಿ ರೂ.3000/-ನ್ನು Demand Draft ಮೂಲಕ ಸಂಬಂಧಪಟ್ಟ ಕೆಆರ್ ಐಡಿಎಲ್ ವಿಭಾಗ ಕಛೇರಿಗಳಿಗೆ ಸಲ್ಲಿಸುವುದು.
2. ಗ್ರೂಪ್ ಲೀಡರ್ ನೋಂದಣಿಯ ನಂತರ ಗ್ರೂಪ್ ಲೀಡರ್‌ಗಳು ಸಲ್ಲಿಸುವ ರೂ.3000/-ಗಳ Demand Draft ಗಳನ್ನು ಕಾರ್ಯಪಾಲಕ ಅಭಿಯಂತರರು ಈ ಪತ್ರದೊಂದಿಗೆ ಲಗತ್ತಿಸಿರುವ ನಮೂನೆಯಲ್ಲಿ ವಿಭಾಗವಾರು / ವಲಯವಾರು ಎಲ್ಲಾ ವಿವರಗಳನ್ನು ತಯಾರಿಸಿ, ಲೆಕ್ಕ ಪತ್ರ ಶಾಖೆಗೆ, ಸದರಿ Demand Draft ಗಳನ್ನು ಬ್ಯಾಂಕಿನಲ್ಲಿ ಜಮಾ ಮಾಡಲು ಕೇಂದ್ರ ಕಛೇರಿಗೆ ಕಳುಹಿಸಿಕೊಡಲು ನಿರ್ದೇಶಿಸಿದೆ.
3. ಈ ಹಿಂದಿನಂತೆ GROUP LEADER / VENDER ENROLLMENT CERTIFICATE ನ್ನು ಕಾರ್ಯಪಾಲಕ ಅಭಿಯಂತರರು ಮತ್ತು ಅಧೀಕ್ಷಕ ಅಭಿಯಂತರರ ಸಹಿಯೊಂದಿಗೆ ವಿತರಿಸಲು ಆದೇಶಿಸಿದೆ.
4. ಗ್ರೂಪ್ ಲೀಡರ್ ನೋಂದಣಿಯ ನಂತರ ಗ್ರೂಪ್ ಲೀಡರ್‌ಗಳು ಸಲ್ಲಿಸುವ ವಿಭಾಗವಾರು ವಿವರಗಳನ್ನು ಈ ಪತ್ರದೊಂದಿಗೆ ಲಗತ್ತಿಸಿರುವ Excel Sheet ನಮೂನೆಯಲ್ಲಿ ಭರ್ತಿ ಮಾಡಿ ಅಧೀಕ್ಷಕ ಅಭಿಯಂತರರ ಮೂಲಕ ಕೇಂದ್ರ ಕಛೇರಿಗೆ ಸಲ್ಲಿಸಲು ಸೂಚಿಸಲಾಗಿದೆ.

ಮೇಲಿನ ಅಂಶಗಳಂತೆ ಗ್ರೂಪ್ ಲೀಡರ್ ಗಳನ್ನು ನೋಂದಣಿ / ಮರು ನೋಂದಣಿಯನ್ನು ನಿಯಮಾನುಸಾರ ಕೈಗೊಳ್ಳಲು ಆದೇಶಿಸಿದೆ.

**ವ್ಯವಸ್ಥಾಪಕ ನಿರ್ದೇಶಕರು**
**ಕೆ.ಆರ್.ಐ.ಡಿ.ಎಲ್, ಬೆಂಗಳೂರು**

**ಪ್ರತಿಯನ್ನು**

- ಮುಖ್ಯ ಅಭಿಯಂತರರು (ಬಿಬಿಎಂಪಿ / ಕೇಂದ್ರಿಯ /ಉತ್ತರ), ಕೆ.ಆರ್.ಐ.ಡಿ.ಎಲ್ ರವರ ಮಾಹಿತಿಗಾಗಿ.
- ಮುಖ್ಯ ಹಣಕಾಸು ಅಧಿಕಾರಿಗಳು, ಕೆ.ಆರ್.ಐ.ಡಿ.ಎಲ್ ರವರ ಮಾಹಿತಿಗಾಗಿ.
- ಮುಖ್ಯ ಆಡಳಿತಾಧಿಕಾರಿಗಳು, ಕೆ.ಆರ್.ಐ.ಡಿ.ಎಲ್ ರವರ ಮಾಹಿತಿಗಾಗಿ.
- ಉಪ ಹಣಕಾಸು ಅಧಿಕಾರಿಗಳು, ಕೆ.ಆರ್.ಐ.ಡಿ.ಎಲ್ ರವರ ಮಾಹಿತಿಗಾಗಿ.
- ಅಧೀಕ್ಷಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ಬೆಂಗಳೂರು / ಬಿಬಿಎಂಪಿ / ಬೆಳಗಾವಿ / ಕೇಂದ್ರಿಯ (ಚಿತ್ರದುರ್ಗ) / ಮೈಸೂರು / ಕಲಬುರಗಿ ವಲಯ, ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
- ಎಲ್ಲಾ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.
- ಎಲ್ಲಾ ಸಹಾಯಕ ಕಾರ್ಯಪಾಲಕ ಅಭಿಯಂತರರು, ಕೆ.ಆರ್.ಐ.ಡಿ.ಎಲ್, ರವರ ಮಾಹಿತಿಗಾಗಿ ಮತ್ತು ಸೂಕ್ತ ಕ್ರಮಕ್ಕಾಗಿ.